ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Saturday, 5th May, 1979 / Vaishaka 15, 1901, S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI. P. VENKATARAMANA) in the Chair].

STARRED QUESTIONS

(to which oral Answers were given)

Combined Dispensary at Huliyar, Tumkur District.

2 SRI T. B. JAYACHANDRA (Kallambella).—Will the Minister for Health and Family Welfare be pleased to state:—

(a) whether there is a proposal before Government to sanction a Combined Dispensary at Huliyar, Chikkanayakanahally Taluk, Tumkur District;

(b) if so, what is the total amount to be deposited for the Combined Dispensary by the people;

(c) the amount so far deposited and the amount yet to be deposited;

(d) whether Government intend to Collect further deposit for starting this Dispensary;

(e) whether Government would start this Dispensary immediately, after the conditions in sanctioning a Dispensary are fulfilled?

SRI M. MALLAPPA (Minister for Health and Family Welfare).—

(a) Yes.

(b) The entire cost of the building has to be deposited as per the current Public Works Department estimates.

(c) So far the Town Panchayat and Taluka Development Board have credited Rs. 60,000 only towards the construction of buildings. The amount to be deposited would be as per the revised Public Works Department estimates.

(d) It is for Local bodies to expedite the donation amount for starting the construction of the building.

(e) The question does not arise at this stage.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರ್‌ನಲ್ಲಿ ಒಂದು ಸಂಯುಕ್ತ ಔಷಧಾಲಯವನ್ನು ಕಟ್ಟುವುದಕ್ಕಾಗಿ ನಾವು ಈಗಾಗಲೇ ೬೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಈ ವಿಚಾರದಲ್ಲಿ ೧೯೬೫ನೇ ಇಸವಿಯಲ್ಲಿ ಲೋಕೋಪಯೋಗಿ ಇಲಾಖೆಯವರು ಒಂದು ಅಂದಾಜನ್ನು ತಯಾರು ಮಾಡಿದ್ದಾರೆ. ಅದರಂತೆ ಆಗ ೬೦ ಸಾವಿರ ಇತ್ತು, ಆಮೇಲೆ ೬೫ ಸಾವಿರ ಆಯಿತು, ಈಗ ೭೫ ಸಾವಿರ ಆಗಿದೆ. ಹಣವನ್ನೆಲ್ಲಾ ಒಂದೇ ಸಾರಿ ಕೊಟ್ಟುಬಿಟ್ಟಿದ್ದರೆ ಈ ರೀತಿ ಬದಲಾವಣೆಯಾಗುವುದಕ್ಕೆ ಕಾರಣ ಇರಲಿಲ್ಲ. ಆದರೂ ಈಗ ಬ್ಯಾಲೆನ್ಸ್ ಹಣ ಏನಿದೆ ಅದನ್ನು ಟೌನ್ ಪಂಚಾಯಿತಿಯವರಿಂದ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಂದ ಕೊಡಿಸಿದರೆ ಮುಂದಿನ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಇದು ೧೦ ವರ್ಷಗಳಿಂದ ಇರತಕ್ಕಂಥ ವ್ಯವಹಾರ, ಈಗಾಗಲೇ ಅವರು ೬೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರ ಮೇಲಿನ ಬಡ್ಡಿಗಾಗಿ ಅವರಿಂದ ೧೫ ಸಾವಿರ ರೂಪಾಯಿಗಳ ಮೇಲೆ ಹೋಗುತ್ತಿದೆ. ಆದ್ದರಿಂದ ಟೌನ್ ಪಂಚಾಯತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಉಳಿದ ಹಣವನ್ನು ಕೊಡತಕ್ಕಂಥ ವಾಟ್ಟದಲ್ಲಿ ಈಗ ಇಲ್ಲ. ಅದಕ್ಕೋಸ್ಕರ ಸರ್ಕಾರದವರಿಂದ ಆ ಹಣವನ್ನು ಕೊಡಿಸುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಂ ಮಲ್ಲಪ್ಪ.—ಈ ವಿಚಾರದಲ್ಲಿ ಟೌನ್ ಪಂಚಾಯತಿಯವರು ಹಾಗೂ ತಾಲ್ಲೂಕು ಬೋರ್ಡ್‌ನವರು ಒಂದು ತೀರ್ಮಾನ ಮಾಡಿ, ಹಣ ಕೊಡುವುದಕ್ಕೆ ಒಪ್ಪಿಕೊಂಡು ಒಂದು ರೆಸೆಲ್ಯೂಷನ್ ಕಳಿಸಿಕೊಟ್ಟಮೇಲೆ ಕೂಡ ಅವರು ಅವರ ಭಾಗದ ಕರ್ತವ್ಯವನ್ನು ಮಾಡದೆ ಇರುವುದರಿಂದ ಇದರಲ್ಲಿ ಲೋಪವಾಗಿದೆ, ಇದು ಸರ್ಕಾರದ್ದಲ್ಲ. ಉಳಿದ ಹಣವನ್ನು ಆದಷ್ಟು ಬೇಗ ಅವರು ಕಟ್ಟಿದರೆ ಈ ಬಗ್ಗೆ ಸರ್ಕಾರ ಇವಕ್ಕೆ ಮಂಜೂರಾತಿ ಕೊಟ್ಟು ಮುಂದಿನ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಈಗ ನಮಗೆ ಅವಶ್ಯಕವಾಗಿ ಒಂದು ಎಕ್ಸ್‌ರೇ ಪ್ಲಾಂಟ್ ಬೇಕಾಗಿದೆ. ಇದಕ್ಕಾಗಿ ೧೫ ಸಾವಿರ ರೂಪಾಯಿಗಳನ್ನು ಸರ್ಕಾರದವಂದ ಕೊಡಿಸುವುದಕ್ಕೆ ತಾವು ವ್ಯವಸ್ಥೆ ಮಾಡುತ್ತೀರಾ ? ಎಕ್ಸ್‌ರೇ ಪ್ಲಾಂಟನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಇದು ೧೨ ಹಾಸಿಗೆಗಳ ಒಂದು ಸಂಯುಕ್ತ ಹಾಸ್ಪಿಟಲ್. ಕೂಸು ಹುಟ್ಟುವುದಕ್ಕಿಂತ ಮೊದಲೇ ಕುಲಾವಿ ಹೊಲೆಸಬೇಕು ಎಂದರೆ ಅದು ಆಗುವುದಿಲ್ಲ. ಕಟ್ಟಡ ನಿರ್ಮಾಣಕ್ಕಾಗಿ ಏನೇನು ಅನುಕೂಲಗಳು ಬೇಕೋ ಅದನ್ನು ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ಮೊದಲು ಹಣ ಕೊಡಿ. ಕಟ್ಟಡ ಆದಮೇಲೆ ಎಲ್ಲಾ ವ್ಯವಸ್ಥೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

Rural Water Supply Schemes in Gulbarga District.

265 SRI GOVIND P. VADEYARAJ (Kamalapur).—Will the Minister for Rural Development and Panchayat Raj be pleased to state :—

(a) the number of villages with and without drinking water facilities in Gulbarga District (Taluk-wise figures may please be furnished) ;

---

† Indicate that remarks or speeches have not been revised by the member concerned.